ದಿನಾಂಕಃ **03.11.2023** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ **2** ನೇ ಪ್ರತಿವಾದಿ ಪರ ಮಾನ್ಯ ಶ್ರೀ ಎಲ್ ವಿ ವಕೀಲರಿಂದಃ</u>

**1** ನೇ ಪ್ರತಿವಾದಿಯ ಹೆಸರು ಸುಬ್ಬೇಗೌಡ. ಅವರಿಗೆ ಒಂದು ಗಂಡು ಮತ್ತು **1** ಹೆಣ್ಣು ಮಗು. ಮಗಳ ಹೆಸರು ಚಿಕ್ಕತಾಯಮ್ಮ. ಅವರನ್ನು ತಾಯಮ್ಮ ಎಂದು ಕರೆಯುತ್ತಿದ್ದರು. ಅವರು ಈಗಲೂ ಬದುಕಿದ್ದಾರೆ. ಸದರಿಯವರನ್ನು ಪಕ್ಷಗಾರರಾಗಿ ಮಾಡಿಲ್ಲ. ದಾವಾ ಆಸ್ತಿ ಜವರೇಗೌಡರ ಪಿತ್ರಾರ್ಜಿತ ಆಸ್ತಿ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ಚಿಕ್ಕತಾಯಮ್ಮನಿಗೆ ಸಮನಾದ ಹಕ್ಕು ಇದೆ ಎಂದರೆ ಸರಿ. ಅವರನ್ನು ಪಕ್ಷಗಾರರಾಗಿ ಮಾಡಲು ತೊಂದರೆ ಇಲ್ಲ.

**2** ನೇ ಪ್ರತಿವಾದಿ ಜವರೇಗೌಡರ ಹಿರಿಯ ಹೆಂಡತಿಯ ಮಗ. **2** ನೇ ಪ್ರತಿವಾದಿಯ ತಂದೆ-ತಾಯಿ ಮದುವೆ **2001** ಅಥವಾ **2002** ರಲ್ಲಿ ಆಗಿರುತ್ತದೆ. ನನ್ನ ಮದುವೆ ಆಗಿ ಸುಮಾರು **13** ವರ್ಷಗಳಾಗಿರುತ್ತದೆ. ಜವರೇಗೌಡರ ಮೊದಲನೆ ಹೆಂಡತಿಯ ಹೆಸರು ಸವಿತಾ. **2** ನೇ ಪ್ರತಿವಾದಿ ಜವರೇಗೌಡರೊಂದಿಗೆ ವಾಸವಾಗಿಲ್ಲ, ಅಜ್ಜಿಯ ಮನೆಯಲ್ಲಿ ವಾಸವಿರುತ್ತಾರೆ. ಅಜ್ಜಿಯ ಮನೆ ಜಿ. ಬೊಮ್ಮನಹಳ್ಳಿ, ದೇವಲಾಪುರ ಹೋಬಳಿ, ನಾಗಮಂಗಲ ತಾಲ್ಲೂಕಿನಲ್ಲಿ ಇರುತ್ತದೆ. **2** ನೇ ಪ್ರತಿವಾದಿಯ ಅಜ್ಜಿಯ ಹೆಸರು ಸುಂದರಮ್ಮ, ಅವರು ಬದುಕಿರುತ್ತಾರೆ. **2** ನೇ ಪ್ರತಿವಾದಿಯ ಎಲ್ಲಾ ವಿಚಾರಗಳನ್ನು ಸುಂದರಮ್ಮ ನೋಡಿಕೊಳ್ಳುತ್ತಿದ್ದಾರೆ ಎಂದರೆ ಸರಿ. ವಾದಪತ್ರದಲ್ಲಿ **2** ನೇ ಪ್ರತಿವಾದಿಯ ವಿಳಾಸವನ್ನು ಆಧಾರ ಕಾರ್ಡ್ ನಂತೆ ನಮೂದು ಮಾಡಿರುತ್ತೇನೆ. **2** ನೇ ಪ್ರತಿವಾದಿ ವಾಸ್ತವವಾಗಿ

ವಾಸವಾಗಿರುವ ವಿಳಾಸವನ್ನು ಕೊಡಲು ತೊಂದರೆ ಇರಲಿಲ್ಲ. ಈಗ **2** ನೇ ಪ್ರತಿವಾದಿಯ ಸರಿಯಾ ವಿಳಾಸವನ್ನು ಕೊಡಲು ತೊಂದರೆ ಇಲ್ಲ. ನಾನು ತಪ್ಪು ವಿಳಾಸ ಕೊಟ್ಟಿರುವ ಕಾರಣ **2** ನೇ ಪ್ರತಿವಾದಿಗೆ ಅಥವಾ ಅವರ ಅಜ್ಜಿ ಸುಂದರಮ್ಮನಿಗೆ ಈ ದಾವೆಯ ವಿಚಾರ ಗೊತ್ತಾಗಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಮತ್ತು ಜವರೇಗೌಡ ಈಗ **5** ವರ್ಷಗಳಿಂದ ಬೇರೆ ಬೇರೆಯಾಗಿದ್ದೇವೆ. ನಾನು ಮತ್ತು **1** ನೇ ಪ್ರತಿವಾದಿ ಒಟ್ಟಿಗೆ ವಾಸವಿದ್ದರೂ **2** ನೇ ಪ್ರತಿವಾದಿಗೆ ತೊಂದರೆ ನೀಡುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. **2** ಮತ್ತು **3** ನೇ ವಾದಿಗಳು ನನ್ನ ಮತ್ತು **1** ನೇ ಪ್ರತಿವಾದಿಯೊಂದಿಗೆ ವಾಸವಿರುವ ಕಾರಣ ಅವರನ್ನು ನೋಡಿಕೊಳ್ಳುವುದಿಲ್ಲ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲಲ. **2** ನೇ ಪ್ರತಿವಾದಿಗೆ ಸುಳ್ಳು ವಿಳಾಸ ನೀಡಿ ಸುಳ್ಳು ದಾವೆ ಸಲ್ಲಿಸಿರುತ್ತೀರಿ ಎಂದರೆ ಸರಿಯಲ್ಲ, ನನ್ನ ಗಂಡ ಅವಾಚ್ಯ ಶಬ್ದಗಳಿಂದ ಬೈದು ನನ್ನನ್ನು ಮನೆ ಹೊರಗೆ ಹಾಕಿರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ.

ನಾನು ನನ್ನ ಗಂಡನ ವಿರುದ್ದ ಕೊಪ್ಪ ಠಾಣೆಯಲ್ಲಿ ದೂರನ್ನು ಸಲ್ಲಿಸಿದ್ದು ಪಂಚಾಯಿತಿ ಕೂಡ ಆಗಿರುತ್ತದೆ ಎಂಬ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು ನನ್ನ ಸಾಕ್ಷ್ಯ ಪ್ರಮಾಣಪತ್ರದಲ್ಲಿ **1** ನೇ ಪ್ರತಿವಾದಿ ಮತ್ತು ಅವರ ಸಹೋದರ ಎಂದು ನಮೂದು ಮಾಡಿದ್ದು ಸದರಿ ಸಹೋದರ ಅವರ ದೊಡ್ಡಪ್ಪನ ಮಗ ನಂಜುಂಡಪ್ಪ ಆಗಿರುತ್ತಾರೆ. ನಂಜುಂಡಪ್ಪ ಮತ್ತು **1** ನೇ ಪ್ರತಿವಾದಿ ತಮ್ಮ ಜಮೀನುಗಳನ್ನು ವಿಭಾಗ ಮಾಡಿಕೊಂಡಿರುತ್ತಾರೆ. **2** ಮತ್ತು **3** ನೇ ಪ್ರತಿವಾದಿಗಳಿಗೆ ಆಸ್ತಿ ಕೊಡಲು **1** ನೇ ಪ್ರತಿವಾದಿ ನಿರಾಕರಿಸಿದ

ವಿಚಾರ ಸುಳ್ಳು ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ¼ ಪಾಲು **2** ಮತ್ತು **3** ನೇ ವಾದಿಗೆ ಇರುವ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನನ್ನ ಮಕ್ಕಳ ಪರವಾಗಿ **1** ನೇ ಪ್ರತಿವಾದಿಯನ್ನು ಭಾಗ ಕೇಳಿದ ವಿಚಾರ ಸುಳ್ಳು ಎಂದರೆ ಸರಿಯಲ್ಲ. ನಾನು **1** ನೇ ಪ್ರತಿವಾದಿಯನ್ನು ಅವರ ಮನೆಯಲ್ಲಿ ಭಾಗ ಕೇಳಿರುತ್ತೇನೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೋರಿ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಪ್ರಧಾನ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಮದ್ದೂರು.

ಸಾಕ್ಷಿ ಸಹಿಃ